ಶಾಸ್ತ್ರೀಯ ಛಂದಸ್ಸಿನ ಜೊತೆಗೆ ಅನೇಕ ಯುವ ಬರಹಗಾರರು ಮುಕ್ತ ಛಂದಸ್ಸು, ಗ್ರಾಫಿಕ್, ಕವಿತೆ ಮತ್ತು ಸಂಗೀತದೊಂದಿಗೆ ಬೆರೆಸಿದ ಪ್ರದರ್ಶನಾತ್ಮಕ ಕಾವ್ಯವನ್ನು ಡಿಜಿಟಲ್ ವೇದಿಕೆಗಳಲ್ಲಿ ಪ್ರಯೋಗ ಮಾಡುತ್ತಾರೆ. ಅಂತರ್ಜಾಲವು ಕವಿತೆಗಾಗಿ ಹೊಸ 'ಸಾರ್ವಜನಿಕ ವೇದಿಕೆ'ಯನ್ನು ಸೃಷ್ಟಿಸಿದೆ. ಅಲ್ಲಿ ವೈಯಕ್ತಿಕ ಧ್ವನಿಗಳು ತಕ್ಷಣವೇ ಅನುರಣಿಸಬಹುದು ಮತ್ತು ಓದುಗರಿಂದ ತಕ್ಷಣದ ಪ್ರತಿಕ್ರಿಯೆಗಳನ್ನು ಪಡೆಯಬಹುದು. ಸಂಪ್ರದಾಯವನ್ನು ಗೌರವಿಸುತ್ತಾ ಅದೇ ಸಮಯದಲ್ಲಿ ಪ್ರಯೋಗ ಮಾಡಲು ಧೈರ್ಯ ತೋರುವ ಈ ದ್ವಿಮುಖ ಚಲನೆಯೇ ಸಮಕಾಲೀನ ವಿಯೆಟ್ನಾಮಿ ಕಾವ್ಯಕ್ಕೆ ನವ ಚೈತನ್ಯ ಮತ್ತು ಸಮೃದ್ಧ ಭರವಸೆಯನ್ನು ನೀಡುತ್ತದೆ.

**◆ ನಿಮ್ಮ ಬದುಕು ಮತ್ತು ಬರಹಕ್ಕೆ ಪ್ರೇರಣೆ ನೀಡುವ ನಿಜಸಂಗತಿಗಳು ಯಾವುವು?**

ನನ್ನೊಳಗೆ ಚಲಿಸುವ ಧ್ವನಿಯಿಂದಲೇ ನಾನು ಸ್ಫೂರ್ತಿ ಪಡೆದಿದ್ದೇನೆ. ಅದನ್ನು 'ಲಯ'ವೆಂದು ಕರೆಯಬಹುದು. ನಿಮ್ಮೊಳಗನ್ನು ಇಣುಕಿ ನೋಡಿದಾಗ ಕವಿತೆ ಕಾಣುತ್ತದೆ. ಖಂಡಿತವಾಗಿಯೂ ಅದು ನಿಮ್ಮ ಒಳಗೂ ಇದೆ, ಹೊರಗೂ ಇದೆ ಅನ್ನಿಸುತ್ತೆ. ಬುದ್ಧನ ನಗುವಿಗಿಂತಲೂ ದೊಡ್ಡ ಕವಿತೆ ಯಾವುದಿದೆ ನೀವೇ ಹೇಳಿ?

ವಿಯೆಟ್ನಾಮಿ ಸಂಸ್ಕೃತಿ ಎಂದರೆ ಕೇವಲ ಆಚರಣೆಗಳಲ್ಲಿಲ್ಲ, ಅದರ ಆಧ್ಯಾತ್ಮಿಕ ಸ್ಪಂದನೆಯಲ್ಲಿದೆ. ಉದುರುವ ಎಲೆ, ಹರಿಯುವ ಹಳ್ಳ, ಮೊಲದ ಓಟ, ಹಕ್ಕಿಯ ಹಾರಾಟ ಪ್ರತಿಯೊಂದು ಪೂರ್ವಜರ ಪಿಸುದನಿಯಲ್ಲಿಯೂ ಜೀವಂತ ಪ್ರಾಣವಿದೆ ಎನ್ನುವ ನಂಬಿಕೆ ನನ್ನೊಳಗೂ ಬೇರೂರಿದೆ. ನಾನು ಬರೆಯುವಾಗ ಆ ಪರಂಪರೆಯ ನಾದ ನನ್ನೊಳಗೆ ಪ್ರತಿಧ್ವನಿಸುತ್ತದೆ. ಊರಾಚೆ ಹೊಲಗಳಲ್ಲಿ ಬೀಸುವ ಗಾಳಿಯ ಶಬ್ದ, ಧೂಪದ ವಾಸನೆ, ಪ್ರಾರ್ಥನೆಯ ದನಿ ಮತ್ತು ಜನರ ವಿನಯಶೀಲ ನಡವಳಿಕೆ — ಇವೆಲ್ಲಾ ನನ್ನ ಕವಿತೆಯ ಹೃದಯದ ತಾಳವಾಗಿವೆ. ವಿಯೆಟ್ನಾಂ ಭಾಷೆಯೇ ಸಂಗೀತದಂತೆ ಹರಿಯುತ್ತದೆ; ಅದರ ನಾಜೂಕು ಲಯ ಮತ್ತು ಶಿಸ್ತಿನಲ್ಲಿಯೇ ನಾನು ನನ್ನ ಕವಿತೆಯ ಉಸಿರು ಹುಡುಕುತ್ತೇನೆ. ಅದೊಂದು ಮಹಾ ಶಕ್ತಿ. ಅದು ಉಕ್ಕಿ ಹರಿಯುವಾಗ, ನಾನು ಬರೆಯುತ್ತೇನೆ. ಮತ್ತೆ ಕೆಲವೊಮ್ಮೆ ಏನೂ ಬರೆಯದೆ ಸುಮ್ಮನೆ ಉಳಿದುಬಿಡುತ್ತೇನೆ. ಅದು ಹುದುಗಿನ ಸಮಯ... ತಾಯಿ ಕೋಳಿಯ ಹಾಗೆ ತಾನಿಟ್ಟ ಮೊಟ್ಟೆಗಳ ಮೇಲೆ ಕಾವು ಕೊಡುವ ಘಳಿಗೆ...

**◆ ಪದೇ ಪದೇ ನಿಮಗೆ ಬೀಳುವ ಕನಸು ?**

ನನ್ನ ಕನಸುಗಳ ಲೋಕ ವಿಶಾಲವಾಗಿಯೂ ಅದ್ಭುತವಾಗಿಯೂ ಇದೆ. ಕೆಲವೊಮ್ಮೆ ಅದು ಎಷ್ಟು ಜೀವಂತವಾಗಿರುತ್ತದೆಯೆಂದರೆ, ಅದು ನನ್ನ ಜಾಗೃತ ಸ್ಥಿತಿಗಿಂತಲೂ ಹೆಚ್ಚು ನಿಜದಂತೆ ತೋರುತ್ತದೆ. ಗದ್ದೆ ಬಯಲಿನಷ್ಟು ವಿಶಾಲವಾದ ಹೂಗಳು, ಜಟೆ ಬೆಳೆಸಿಕೊಂಡ ವಿಚಿತ್ರವಾಗಿ ನಡೆದಾಡುವ ಮರಗಳು, ಡ್ರ್ಯಾಗನ್‌ನಂಥ ಪವಿತ್ರ ದೈವಿಕ ಜೀವಿಗಳ ಕನಸುಗಳು – ಅನೇಕ ಸುಂದರ ಮತ್ತು ರಹಸ್ಯಮಯ ಸ್ವಪ್ನಗಳು ನನಗೆ ಆಗಾಗ ಮರುಕಳಿಸುತ್ತವೆ. ಕನಸಿನಲ್ಲಿ ಇದೆಲ್ಲವನ್ನೂ ನೋಡುತ್ತಾ, ನೋಡುತ್ತಾ ನಾನೂ ಈ ಮಾಂತ್ರಿಕ ಜಗತ್ತಿನ ಭಾಗವಾಗಿ ಬಿಡುತ್ತೇನೆ. ನನಗೇ ಗೊತ್ತಿಲ್ಲದ ಹಾಗೆ, ನನ್ನದಲ್ಲದ ಮತ್ತೊಂದು ಭಾಷೆಯಲ್ಲಿ, ಮತ್ತೊಂದು ಲೋಕದಲ್ಲಿ ಅವುಗಳೊಂದಿಗೆ 'ಸಂವಾದ' ನಡೆಸುತ್ತೇನೆ.

ಇನ್ನೊಂದು ವಿಚಿತ್ರ ಹಾಗೂ ವಿಲಕ್ಷಣವಾದ ಕನಸು ನನಗೆ ಆಗಾಗ ಬೀಳುತ್ತದೆ. ನಾನು ಅಪಾರ ಜನಸಮೂಹದ ಮುಂದೆ ನಿಂತಿರುತ್ತೇನೆ. ಆದರೆ, ಅವರೊಂದಿಗೆ ಎಂದಿಗೂ ಬೆರೆತು ಒಂದಾಗಲಾರೆ. ಅವರು ಲಕ್ಷಾಂತರ ಇರುವೆಗಳಂತೆ ನನ್ನ ಮುಂದಿನಿಂದ ಹಾದು ಹೋಗುತ್ತಾರೆ. ಆದರೆ, ಅವರನ್ನು ಸ್ಪರ್ಶಿಸಲಾರೆ. ಆ ಕ್ಷಣಗಳಲ್ಲಿ, ನಾನು ಕೇವಲ ವೀಕ್ಷಕಳಾಗಿರುತ್ತೇನೆ.

**◆ ನಿಮ್ಮನ್ನು ಹೆಚ್ಚು ಆತಂಕಕ್ಕೆ ದೂಡುವ ಸಂಗತಿ ಯಾವುದು ?**

ನನಗೆ ಹೆಚ್ಚು ಭಯಾನಕವಾಗಿ ಕಾಣುವುದು ಬಹುಶಃ ಮಾನವನ ನಿರ್ಲಿಪ್ತತೆ ಮತ್ತು ಅಸೂಯೆ. ಅವು ಮೇಲುನೋಟಕ್ಕೆ ಕಾಣುವಷ್ಟು ಸರಳವಲ್ಲ. ಮನುಷ್ಯನನ್ನೇ ನಾಶ ಮಾಡುವ ಅವುಗಳ ಶಕ್ತಿ ಅಪಾರವಾಗಿದೆ. ಮನಸ್ಸಿನದ್ದೇ ಆಗಿರಲಿ ಅಥವಾ